## ಆರ್ಡಿಯೊ

ಇದು ನಿರಂತರ ಸಂಗೀತದ ಖುಷಿ ಒದಗಿಸುವ ವಿಂಡೋಸ್ ಫೋನ್ ಆ್ಯಪ್. ವಿವಿಧ ಬಗೆಯ ಹಾಡುಗಳ ದೊಡ್ಡ ಪಟ್ಟಿಯೇ ಲಭ್ಯವಿದ್ದು ಧ್ವನಿಯ ಗುಣಮಟ್ಟವೂ ಚೆನ್ನಾಗಿದೆ. ಮೇಲ್ಮೈ ವಿನ್ಯಾಸ ಟ್ರೆಂಡಿಯಾಗಿದ್ದು, ವೆಬ್ ಮತ್ತು ಐಫೋನ್ ಆವೃತ್ತಿಗಳಿಗೆ ಹೋಲಿಸಿದರೆ ಅತ್ಯುತ್ತಮ ಎನ್ನಬಹುದು. ಆದರೆ ಅಂತರ್ಜಾಲದ ಸಂಗೀತದ ರೇಡಿಯೊ ಕೇಂದ್ರಗಳನ್ನು ಸೃಷ್ಟಿಸುವ ಸೌಲಭ್ಯವಿಲ್ಲ. ಸಾಮಾಜಿಕ ಜಾಲತಾಣಗಳ ಜೊತೆ ಬೆಸೆಯುವ ಸಲವತ್ತೂ ಇಲ್ಲ. ಜೊತೆಗೆ ಹಾಡಿನ ತುಣುಕನ್ನಷ್ಟೇ ಉಚಿತವಾಗಿ ಕೇಳಬಹುದು. ಸಂಪೂರ್ಣ ಆಲಿಸಲು ಶುಲ್ಕ ನೀಡಬೇಕು.







## ಅಮೆಝ್ಯಾನ್

ಇದು ಆ್ಯಂಡ್ರಾಯ್ಡ್ ಆ್ಯಪ್. ಇದರ ಮೂಲಕ ಬ್ರೌಸ್ ಮಾಡಬಹುದು, ಖರೀದಿ ಮಾಡಬಹುದು, ಬೇರೆ ಆನ್‌ಲೈನ್ ಷಾಪಿಂಗ್‌ನಲ್ಲಿರುವ ಗ್ರಾಹಕ ಸಾಮಗ್ರಿಗಳ ಜೊತೆ ಹೋಲಿಸಿ ನೀಡಬಹುದು. ಬ್ರೌಸ್ ಮಾಡುವುದು ಅತ್ಯಂತ ಸರಳ. ಸಾಮಗ್ರಿಗಳನ್ನು ಸ್ಕ್ಯಾನ್ ಮಾಡುವ ಸವಲತ್ತೂ ಇದೆ. ಅಮೆಝ್ಯಾನ್.ಕಾಂನಲ್ಲಿ ಬ್ರೌಸ್ ಮಾಡಿದರೆ ಇಡೀ ವೆಬ್‌ಸೈಟನ್ನೇ ನಿಮ್ಮ ಮೊಬೈಲ್‌ನಲ್ಲಿ ಹುಡುಕಾಡಬೇಕಾಗುತ್ತದೆ. ಆದರೆ ಈ ಆ್ಯಪ್‌ನಲ್ಲಾದರೆ ನಿಮಗೆ ಬೇಕಾದ ವಸ್ತುಗಳನ್ನೇ ನೋಡಬಹುದು, ವಿಶ್ ಲಿಸ್ಟ್ ಸೃಷ್ಟಿಸಬಹುದು. ಮೊಬೈಲ್ ಕ್ಯಾಮೆರಾ ಬಳಸಿ ಸಾಮಗ್ರಿಗಳನ್ನು ಸ್ಕ್ಯಾನ್ ಮಾಡಿಕೊಂಡರೆ ನಂತರ ಮಾರುಕಟ್ಟೆಯಲ್ಲೂ ಹುಡುಕಾಡಲಿಕ್ಕೆ ಅನುಕೂಲ.

## ಬಿಟ್‌ಟೊರೆಂಟ್ ಬ್ಲೀಪ್

ಆ್ಯಂಡ್ರಾಯ್ಡ್‌ನ ಈ ಉಚಿತ ಆ್ಯಪ್ ಅನ್ನು ಖಾಸಗಿ ಸಂದೇಶಗಳನ್ನು ಕಳಿಸಲು ಬಳಸಲಾಗುತ್ತದೆ. ಸಂದೇಶ ಮಧ್ಯೆ ತುಂಡಾಗದೇ ಉದ್ದುದ್ದ ಸಾಲುಗಳಲ್ಲಿ ಕಾಣುತ್ತದೆ. ವಿಂಡೋಸ್ ಮತ್ತು ಓಎಸ್ ಎಕ್ಸ್ ಮಧ್ಯೆ ಕ್ರಾಸ್ ಸಂದೇಶವನ್ನು ಕೂಡಾ ಕಳಿಸುವ ವೇದಿಕೆಯಿದು. ಈ ವ್ಯವಸ್ಥೆಯಲ್ಲಿ ಪ್ರೊಟೊಕಾಲ್ ಬಳಸಿ ಸಂದೇಶ ಕಳಿಸಲು ಸಾಧ್ಯವಿಲ್ಲ, ಬದಲಾಗಿ ಹ್ಯಾಷ್ ಟೇಬಲ್ ಬಳಸಬಹುದು. ಯಾವುದೇ ಮಾಹಿತಿಯನ್ನು ಅಥವಾ ಸಂದೇಶವನ್ನು ಕೇಂದ್ರಿಯ ಸರ್ವರ್‌ನಲ್ಲಿ ಕಾಪಿಡುವುದಿಲ್ಲ. ಹೀಗಾಗಿ ವೈಯಕ್ತಿಕವಾಗಿ ಸಂದೇಶಗಳ ಮೂಲವನ್ನು ಹುಡುಕುವುದು ಕಷ್ಟ.




## ಸ್ಕ್ರ್ಯಾಚ್‌ಜೆಆರ್

ಅಮೆರಿಕಾದ ಮೆಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಭಿವೃದ್ಧಿಪಡಿಸಿದ ಆ್ಯಪ್ ಇದು. ಐದು ವರ್ಷ ವಯಸ್ಸಿನ ಮಕ್ಕಳಿಗೆ ಬೇಸಿಕ್ ಕಂಪ್ಯೂಟರ್ ಪ್ರೋಗ್ರಾಮಿಂಗ್ ಅನ್ನು ಕಲಿಸುವ ಆ್ಯಪ್. ಇದರಲ್ಲಿ ಕತೆಗಳು ಹಾಗೂ ಆಟಗಳನ್ನು ಅಳವಡಿಸಲಾಗಿದ್ದು ಮಕ್ಕಳಲ್ಲಿ ಆಸಕ್ತಿ ಮೂಡಿಸುವುದು ಇದರ ಉದ್ದೇಶ. ಮಕ್ಕಳು ತಮ್ಮ ಪ್ರಾಜೆಕ್ಟ್‌ನಲ್ಲಿ ಗ್ರಾಫಿಕಲ್ ಬ್ಲಾಕ್‌ಗಳನ್ನು ಚಲಿಸಿ ಆಕೃತಿಗಳನ್ನು ರಚಿಸಬಹುದು. ಮಕ್ಕಳು ಪ್ರೋಗ್ರಾಮಿನಲ್ಲಿ ವಿಷಯಗಳನ್ನು ಸೇರಿಸಲು ಕುಪ್ಪಳಿಸುವುದು, ಓಡುವುದು ಮೊದಲಾದ ಟಾಸ್ಕ್‌ಗಳನ್ನು ಮಾಡಬಹುದು. ಈ ಆ್ಯಪ್‌ನಲ್ಲಿ ಬಳಕೆದಾರರ ಭಾವಚಿತ್ರ, ಧ್ವನಿಯನ್ನು ಸೇರಿಸಲು ಅವಕಾಶವಿದೆ.




ಎಸ್. ತುಂಬೆ